**ದಿಃ 28.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 1 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಹೆಚ್ ವಕೀಲರಿಂದಃ

ಈ ಕೇಸನ್ನು ಗಂಗಾಧರಪ್ಪ ಅವರ ಅಣ್ಣ ಕೆಂಚಪ್ಪನ ಮೇಲೆ ಸಲ್ಲಿಸಿರುತ್ತಾನೆ. ಕೆಂಚಪ್ಪ ಅಲ್ಲದೇ ಬೇರೆ ಯಾರ ಮೇಲೆ ಸಲ್ಲಿಸಿರುತ್ತಾನೆ ಎನ್ನುವುದು ಗೊತ್ತಿಲ್ಲ. ವಾದಿ 3 ಜಮೀನುಗಳ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾನೆ.ಅವುಗಳ ಸರ್ವೆ ನಂಬರು ಮತ್ತು ವಿಸ್ತೀರ್ಣ ಹೇಳಲು ಆಗುವುದಿಲ್ಲ. ಮೂರು ಜಮೀನುಗಳು ಅಲ್ಲದೇ ಮನೆಗಳ ಮೇಲೆ ಮತ್ತು ಕಣದ ಮೇಲೆ ದಾವೆಯನ್ನು ಸಲ್ಲಿಸಿರುತ್ತಾನೆ. ಮನೆ ವಿಸ್ತೀರ್ಣ 9 ರಿಂದ 10 ಅಡಿ ಅಗಲ 35 ರಿಂದ 36 ಅಡಿ ಉದ್ದ ಇರುತ್ತದೆ. ಸದರಿ ಮನೆಯ ಚಕ್ಕುಬಂದಿ ಉತ್ತರ ದಕ್ಷಿಣಕ್ಕೆ ದಾರಿ ಇರುತ್ತದೆ ಪೂರ್ವ ಪಶ್ಚಿಮಕ್ಕೆ ಅವರ ಅಣ್ಣ ತಮ್ಮಂದಿರ ಮನೆ ಇರುತ್ತದೆ. ಮನೆಯ ನಂಬರು ಗೊತ್ತಿಲ್ಲ. ಸೈಟು ನಂಬರು ಗೊತ್ತಿಲ್ಲ. ಸದರಿ ಸೈಟು 9 ರಿಂದ 10 ಅಡಿ ಅಗಲ 35 ರಿಂದ 36 ಅಡಿ ಉದ್ದ ಇರುತ್ತದೆ. ಸದರಿ ನಿವೇಶವನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಮೇಲೆ ಹೇಳಿದ ವಿಸ್ತೀರ್ಣದ ಮನೆ ಅಲ್ಲಿ ಯಾವುದು ಇಲ್ಲ ಅಂದರೆ ಸರಿಯಲ್ಲ. ಮೇಲೆ ಹೇಳಿದ ವಿಸ್ತೀರ್ಣದ ಯಾವುದೇ ಜಾಗ ಅಲ್ಲಿ ಇಲ್ಲ ಅಂದರೆ ಸರಿಯಲ್ಲ. ಜಮೀನುಗಳು ಈಗ ಯಾರ ಹೆಸರಿನಲ್ಲಿರುತ್ತದೆ ಎಂದು ಗೊತ್ತಿಲ್ಲ. ವಾದಿ ತನ್ನ ತಂದೆಗೆ ಪಾಲು ವಿಭಾಗದಲ್ಲಿ ಬಂದಂತಹ ಆಸ್ತಿಗಳ ಮೇಲೆ ಕೇಸನ್ನು ಹಾಕಿದ್ದಾನೆಯೇ ಅಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿಗಳ ಮೇಲೆ ಹಾಕಿರುತ್ತಾನೆ ಎಂದು ಹೇಳುತ್ತಾರೆ. ಆಸ್ತಿಗಳು ಅವರ ತಂದೆಯಿಂದ ಬಂದಿರುತ್ತವೆ. ಅವರ ತಂದೆಗೆ ಹೇಗೆ ಬಂದಿರುತ್ತವೆ ಎಂದು ಗೊತ್ತಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಓದಿ ಹೇಳಿರುತ್ತಾರೆ . ನಾನು ಅದನ್ನು ಓದಿ ನೋಡಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚರಣೆ ಪ್ರಮಾಣ ಪತ್ರದಲ್ಲಿ ಜಮೀನು ಸರ್ವೆ ನಂಬರು ಮತ್ತು ವಿಸ್ತೀರ್ಣ ಹೇಳಿ ಬರೆಸಿಲ್ಲ. ಮನೆ , ಸೈಟು ಮತ್ತು ಕಣ ಇವುಗಳ ವಿಸ್ತೀರ್ಣ ಹಾಗೂ ನಂಬರನ್ನು ನಾನು ಹೇಳಿ ಬರೆಸಿಲ್ಲ. ವಾದಿಯ ತಂದೆಯ ಅಣ್ಣ ತಮ್ಮಂದಿರು ಅವರ ಆಸ್ತಿಗಳನ್ನು ಹಂಚಿಕೊಂಡಿದ್ದರು ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ವಾದಿಯ ತಂದೆ ಅವನ ಸಹೋದರರ ಜೂತೆ ವಿಭಾಗ ಮಾಡಿಕೊಂಡಾಗ ಯಾವ ಯಾವ ಆಸ್ತಿಗಳು ಬಂದಿದ್ದವು ಎಂದು ಗೊತ್ತಿಲ್ಲ. ವಾದಿಯ ತಂದೆಗೆ ಮೂರು ಜನ ಸಹೋದರರು ಅವರು ಬಸಪ್ಪ, ನಾಗಪ್ಪ ಮತ್ತು ಪಂಚಪ್ಪ. ಅವರಲ್ಲಿ ಪಂಚಪ್ಪ ಮತ್ತು ಬಸಪ್ಪ ಜೀವಂತ ಇರುತ್ತಾರೆ ವಾದಿಯ ತಂದೆ ಮುರಿಗೆಪ್ಪ ಹಾಗೂ ನಾಗಪ್ಪ ಮೃತ ಪಟ್ಟಿರುತ್ತಾರೆ. ನನಗೆ ತಿಳುವಳಿಕೆ ಬಂದಾಗಿನಿಂದ ಮೇಲೆ ಹೇಳಿದ ನಾಲ್ಕು ಜನ ಸಹೋದರರು ಬೇರೆ ಬೇರೆ ಇದ್ದರು ಎನ್ನುವುದು ನಿಜ. ಆ

ರೀತಿ ಬೇರೆ ಬೇರೆ ಇದ್ದಾಗ ಮುರಿಗೆಪ್ಪ ಒಟ್ಟು ಕುಟುಂಬದ ಯಜಮಾನಿಕೆಯನ್ನು ಮಾಡಿಕೊಂಡು ಬಂದ ಎನ್ನುವುದು ನಿಜ. ಉಳಿದ ಮೂರು ಜನ ಸಹೋದರರು ಅವರವರ ಕುಟುಂಬದ ಯಜಮಾನಿಕೆಯನ್ನು ಮಾಡಿಕೊಂಡು ಬಂದರು ಎನ್ನುವುದು ನಿಜ. ವಾದಿಯ ತಂದೆಗೆ ಮನೆ ಚಕ್ಕುಬಂದಿ ಪೂರ್ವಕ್ಕೆ ಬಿ.ನಾಗಪ್ಪನ ಮನೆ , ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಡಿ.ಪಂಚಪ್ಪನ ಮನೆ , ದಕ್ಷಿಣಕ್ಕೆ ದೊಡ್ಡರಂಗಪ್ಪನ ಮನೆ ಈ ಚಕ್ಕುಬಂದಿಯ ಮಧ್ಯದ ಮನೆ ಬಂದಿತ್ತು ಎನ್ನುವುದು ನಿಜ. ಸದರಿ ಚಕ್ಕುಬಂದಿಯ ಮಧ್ಯದ ಮನೆಯಲ್ಲಿ ವಾದಿಯ ತಂದೆ ವಾಸ ಇದ್ದ ಎನ್ನುವುದು ನಿಜ. ವಾದಿ ಮತ್ತು 1 ನೇ ಪ್ರತಿವಾದಿ ಅವರ ತಂದೆಯಿಂದ ಬಂದಂತಹ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಮುರಿಗೆಪ್ಪ ಇದ್ದಂತಹ ಮನೆಯಲ್ಲಿ ವಾದಿ ವಾಸ ಇದ್ದ ಎನ್ನುವುದು ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಅವರ ತಂದೆಯಿಂದ ಬಂದಂತಹ ಜಮೀನುಗಳನ್ನು ವಿಭಾಗ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ 1982 ರಲ್ಲಿ ಒಟ್ಟು ಕುಟುಂಬ ಬಿಟ್ಟು ಮನೆಯಿಂದ ಹೊರಗೆ ಹೋಗಿದ್ದ ಅಂದರೆ ಸರಿಯಲ್ಲ. ಅವನು ಹೊರಗಡೆ ಹೋಗಿ ಬಿರ್ಲಾ ಫ್ಯಾಕ್ಟರಿಯಲ್ಲಿ ಹಾಗೂ ಎಲೆ ಬಳ್ಳಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಅಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕೋಡಿ ಹಳ್ಳಿ ಜಮೀನನ್ನು ನಾನು ನೋಡಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನನ್ನು 1 ನೇ ಪ್ರತಿವಾದಿ ಕೊಂಡುಕೊಂಡಿರುತ್ತಾನೆ ಅಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಕೋಡಿಹಳ್ಳಿ ಜಮೀನನ್ನು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಒಟ್ಟು ಕುಟುಂಬದಲ್ಲಿದ್ದಾಗ ಕೋಡಿಹಳ್ಳಿ ಜಮೀನನ್ನು ಅವನು ಕೊಂಡುಕೊಂಡಿದ್ದ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿದ್ದಾಗ ಕೋಡಿಹಳ್ಳಿ ಜಮೀನನ್ನು ಅವನು ಕೊಂಡು ಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಊರಲ್ಲಿ ಸರ್ಕಾರಿ ಜಮೀನಿನಲ್ಲಿ ಸರ್ಕಾರದವರು ಸೈಟುಗಳನ್ನು ಮಾಡಿದ್ದರು ಎನ್ನುವುದು ನಿಜ. ಊರಲ್ಲಿ ಯಾರು-ಯಾರಿಗೆ ಮನೆಗಳು ಇಲ್ಲ ಮತ್ತು ನಿವೇಶನ ಇಲ್ಲ ಅವರಿಗೆ ಸದರಿ ಸೈಟುಗಳನ್ನು ಮಂಜೂರು ಮಾಡಿದ್ದರು ಎನ್ನುವುದು ನಿಜ. ಯಾರಾದರೂ ಒಟ್ಟು ಕುಟುಂಬದಲ್ಲಿದ್ದಾಗ ಅಂತವರಿಗೆ ಸೈಟುಗಳನ್ನು ಮಂಜೂರು ಮಾಡಿಲ್ಲ ಅಂದರೆ ಸರಿಯಲ್ಲ. ಮುರಿಗೆಪ್ಪ ಮತ್ತು ಅವನ ಸಹೋದರರು ಪಾಲು ವಿಭಾಗ ಮಾಡಿಕೊಂಡಿರುವುದನ್ನು ನಾನು ಕಣ್ಣಾರೆ ನೋಡಿಲ್ಲ. ಕೋಡಿಹಳ್ಳಿ ಜಮೀನನ್ನು 1 ನೇ ಪ್ರತಿವಾದಿ ಹೆಸರಿಗೆ 32,000-00 ರೂಗಳಿಗೆ 1 ಎಕರೆಯಂತೆ

ಖರೀದಿ ಮಾಡಿರುತ್ತಾನೆ. ನಾನು ಸದರಿ ಕ್ರಯಪತ್ರ ನೋಡಿಲ್ಲ ಆದರೆ ಅವರು ತೆಗೆದುಕೊಂಡಿರುವುದನ್ನು ಹೇಳಿರುತ್ತಾರೆ. 32,000-00 ರೂಗಳಿಗೆ 1 ಎಕರೆಯಂತೆ ಖರೀದಿ ಮಾಡಿರುತ್ತಾರೆ ಎನ್ನುವುದನ್ನು ಪ್ರಮಾಣ ಪತ್ರದಲ್ಲಿ ಬರೆಸೀದಿಯಾ ಅಂದರೆ ಸಾಕ್ಷಿ ವಕೀಲರಿಗೆ ಹೇಳಿರುತ್ತೇನೆ ಅವರು ಬರೆದಿದ್ದಾರೋ ಅಥವಾ ಇಲ್ಲ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಜನತಾ ಬಡಾವಣೆಯಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಸೈಟನ್ನು ಮಂಜೂರು ಮಾಡಿರುತ್ತಾರೆ ಅಂದರೆ ಸಾಕ್ಷಿ ಅವನು ಹಿರೇಮಗ ಆಗಿದ್ದರಿಂದ ಅವನ ಹೆಸರಿಗೆ ಮಂಜೂರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ನಿವೇಶನವನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದು ಅದನ್ನು ಒಟ್ಟು ಕುಟುಬಂದಲ್ಲಿ ಕೊಟ್ಟಿಲ್ಲ ಅಂದರೆ ಸಾಕ್ಷಿ ಹಿರೇ ಮಗ ಎಂದು ಕೊಟ್ಟಿರುವುದು ಗೊತ್ತು ಆದರೆ ಸ್ವಂತಕ್ಕೆ ಕೊಟ್ಟಿರುತ್ತಾರೆ ಎನ್ನುವುದು ಗೊತ್ತಿಲ್ಲ. ಸೈಟ ನಂಬರು 90 ಹಾಗೂ ಖಾತೆ ನಂಬರು 320 ಮುರಿಗೆಪ್ಪನ ಹಿಸ್ಸೆಗೆ ಬಂದಿರುತ್ತದೆ ಎಂದು ಬರೆಸಿರುತ್ತೇನೆ. ಸದರಿ ಸೈಟು ಖಾಲಿ ಇರುತ್ತದೆ. ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸದರಿ ದಾಖಲೆಯನ್ನು ನೋಡಿದ್ದೀಯಾ ಅಂದರೆ ಸಾಕ್ಷಿ ದಾಖಲೆಯನ್ನು ನೋಡಿಲ್ಲ ಅಲ್ಲಿ ಮನೆ ಕಟ್ಟಿಕೊಂಡು ವಾಸ ಇರುತ್ತಾರೆ ಎನ್ನುವುದನ್ನು ನೋಡಿರುತ್ತೇನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಸರ್ಕಾರದವರು ಕೊಟ್ಟಿರುವುದರಲ್ಲಿ ಎಷ್ಟು ಮನೆಗಳು ಇರುತ್ತವೆ ಅಂದರೆ ಸಾಕ್ಷಿ ಒಂದೇ ಮನೆ ಇರುತ್ತದೆ ಎಂದು ಹೇಳುತ್ತಾರೆ. ಅದರಲ್ಲಿ ಹಿಂದೆ ದನ ಕಟ್ಟುತ್ತಾರೆ ಮುಂದೆ ಮನೆ ಮಾಡಿಕೊಂಡು ಇರುತ್ತಾರೆ. ಸರ್ಕಾರದವರು ಕೊಟ್ಟಂತಹ ಜಾಗದಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿ ಅವನ ಹೆಂಡತಿ ಮಕ್ಕಳು ವಾಸ ಇರುತ್ತಾರೆ ಎನ್ನುವುದು ನಿಜ. ಮುರಿಗೆಪ್ಪನ ಅಣ್ಣ ತಮ್ಮಂದಿರಿಗೆ ಮನೆಗಳು ಇರುತ್ತವೆ. ಅವರೆಲ್ಲರೂ ಅವರವರ ಮನೆಯಲ್ಲಿ ವಾಸ ಇರುತ್ತಾರೆ ಎನ್ನುವುದು ನಿಜ. ಅವರೆಲ್ಲಾ ಭಾಗ ಆದಾಗಿನಿಂದ ಅವರವರ ಭಾಗದ ಆಸ್ತಿಯಲ್ಲಿ ವಾಸ ಇರುತ್ತಾರೆ. ಮುರಿಗೆಪ್ಪ ಮತ್ತು ಅವರ ಸಹೋದರರು ಹಿಸ್ಸೆ ಮಾಡಿಕೊಳ್ಳುವ ಸಮಯದಲ್ಲಿ ಮುರಿಗೆಪ್ಪನ ಹಿಸ್ಸೆಗೆ ಬಂದಂತಹ ಮನೆ ಬಿದ್ದಿರಲಿಲ್ಲ ಎನ್ನುವುದು ನಿಜ. ಮುರಿಗೆಪ್ಪನ ಹಿಸ್ಸೆಗೆ ಬಂದಂತಹ ಮನೆಯ ಅಕ್ಕಪಕ್ಕದಲ್ಲಿ ಅವರ ಅಣ್ಣ ತಮ್ಮಂದಿರ ಹಿಸ್ಸೆಗೆ ಬಂದಂತಹ ಮನೆಗಳು ಇರುತ್ತವೆ ಎನ್ನುವುದು ನಿಜ. ಮುರಿಗೆಪ್ಪನ ಅಣ್ಣ ತಮ್ಮಂದಿರು ಅವರ ಹಿಸ್ಸೆಗೆ ಬಂದಂತಹ ಮನೆಗಳಲ್ಲಿ ಹಾಲಿ ವಾಸ ಇರುತ್ತಾರೆ ಎನ್ನುವುದು ನಿಜ. ಪಂಚಪ್ಪನಿಗೆ 4,000-00 ರೂ , ನಾಗರಾಜಪ್ಪನಿಗೆ 4,500-00 ರೂ ಮತ್ತು ಮಲ್ಲೇಶಪ್ಪನಿಗೆ 2 ಪಾಲು ಕೊಟ್ಟಿರುವುದು ನೋಡಿದ್ದೀಯಾ ಅಂದರೆ ಸಾಕ್ಷಿ ಪಾಲು ಕೊಟ್ಟಿರುವುದು ಗೊತ್ತು ಆದರೆ ಯಾವಾಗ ಹಣ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಆ ರೀತಿ ಕೊಟ್ಟಾಗಿ ಮುರಿಗೆಪ್ಪನ ಅಣ್ಣ ತಮ್ಮಂದಿರು ಇದ್ದರು. ಆ ರೀತಿ ಹಣ ಮತ್ತು 2 ಪಾಲು ಕೊಟ್ಟಿರುವುದು ಬರವಣಿಗೆಯಲ್ಲಿ ಇದೆಯಾ ಅಂದರೆ

ಸಾಕ್ಷಿ ಇರಬಹುದು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಮುರಿಗೆಪ್ಪ ಮತ್ತು ಅವನ ಸಹೋದರರು ವಿಭಾಗ ಮಾಡಿಕೊಂಡಿರುವ ಬಗ್ಗೆ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಅದನ್ನು ನೋಡಿದ್ದೀಯಾ ಅಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಮುರಿಗೆಪ್ಪ ಮತ್ತು ಅವನ ಸಹೋದರರು ಹಿಸ್ಸೆ ಮಾಡಿಕೊಂಡಾಗ ಇದ್ದೆಯಾ ಅಂದರೆ ಸಾಕ್ಷಿ ನಾವು ಆಗ ಚಿಕ್ಕವರು ಇದ್ದೆವು ಎಂದು ಹೇಳುತ್ತಾರೆ. ಅವರು ಮಾಡಿಕೊಂಡಂತಹ ಹಿಸ್ಸೆ ಪತ್ರವನ್ನು ಇದುವರೆಗೆ ನಾನು ನೋಡಿಲ್ಲ ಎನ್ನುವುದು ನಿಜ. ನಿಪಿ 31 ರಂತೆ ಮುರಿಗೆಪ್ಪ ಮತ್ತು ಅವನ ಅಣ್ಣ ತಮ್ಮಂದಿರು ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡಿರುತ್ತಾರೆ ಎನ್ನುವುದು ನಿಜ. ಸದರಿ ಪತ್ರಕ್ಕೆ ಮುರಿಗೆಪ್ಪ ಮತ್ತು ಅವನ ಸಹೋದರರು ಸಹಿ ಮಾಡಿರುತ್ತಾರೆ ಎನ್ನುವುದು ನಿಜ. ಮುರಿಗೆಪ್ಪ ಮತ್ತು ಅವರ ಅಣ್ಣ ತಮ್ಮಂದಿರು ಅವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳನ್ನು ನಿಪಿ 31 ರಂತೆ ಹಿಸ್ಸೆ ಮಾಡಿಕೊಂಡಿರುತ್ತಾರೆ ಎನ್ನುವುದು ನಿಜ. ನಿಪಿ 31 ರಲ್ಲಿ ಇರುವಂತಹ ಆಸ್ತಿಗಳನ್ನು ಹೊರತುಪಡಿಸಿ ಅವರ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿಗಳು ಇಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರು 18 ರ ಜಮೀನನ್ನು ನಾನು ನೋಡಿರುತ್ತೇನೆ. ಮುರಿಗೆಪ್ಪನ ಹಿಸ್ಸೆಗೆ ಬಂದಂತಹ ಜಮೀನಿನಲ್ಲಿ ಚಾನಲ್ ಹಾದು ಹೋಗಿರುತ್ತದೆ ಎನ್ನುವುದು ನಿಜ. ಚಾನಲಗೆ ಎಷ್ಟು ಜಮೀನು ಹೋಗಿರುತ್ತದೆ ಎಂದು ಗೊತ್ತಿಲ್ಲ. ಚಾನಲಗೆ ಹೋಗಿ ಸಾಗುವಳಿ ಜಮೀನು ಎಷ್ಟು ಉಳಿದಿದೆ ಎಂದು ಗೊತ್ತಿಲ್ಲ. ನಿಪಿ 32 ರ ಪ್ರಕಾರ ಮುರಿಗೆಪ್ಪನ ಹಿಸ್ಸೆಗೆ ಸರ್ವೆ ನಂಃ 18/ಪಿ ನಲ್ಲಿ 2 ಎಕರೆ 30 ವರೆ ಗುಂಟೆ , ಸರ್ವೆ ನಂಬರ 29/ಪಿ ರಲ್ಲಿ 1 ಎಕರೆ 31 ಗುಂಟೆ ಬಂದಿರುತ್ತವೆ ಎನ್ನುವುದು ನಿಜ. ಮುರಿಗೆಪ್ಪನಿಗೆ ನಿಪಿ 32 ರಲ್ಲಿರುವ ಹೆಂಚಿನ ಮಾಳಿಗೆ ಮನೆ ಬಂದಿರುತ್ತವೆ ಎನ್ನುವುದು ನಿಜ. ನಿಪಿ 32 ರಂತೆ ಮುರಿಗೆಪ್ಪನಿಗೆ ಕಣಪಾಳು 36 ಇಂಟು 9 ಅಡಿ ಬಂದಿರುತ್ತದೆ ಎನ್ನುವುದು ನಿಜ. ಇನ್ನೊಂದು ಕಣಪಾಳು 66 ಇಂಟು 29 ನಿಪಿ 32 ರಂತೆ ಬಂದಿರುತ್ತದೆ ಎನ್ನುವುದು ನಿಜ. ಸದರಿ 36 ಇಂಟು 9 ಅಡಿಯ ಕಣಪಾಳು ಈಗ ಅಸ್ತಿತ್ವದಲ್ಲಿರುತ್ತದೆ. ಮೇಲೆ ಹೇಳಿದ 5 ಆಸ್ತಿಗಳು ಮುರಿಗೆಪ್ಪನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎನ್ನುವುದು ನಿಜ. 36 ಇಂಟು 9 ಅಡಿ ಈಗ ಯಾರ ಹೆಸರಿನಲ್ಲಿರುತ್ತದೆ ಎಂದು ಹೇಳಲಾಗುತ್ತದೆ ಎಂದರೆ ಸಾಕ್ಷಿ ಹಿರೇಯ ಮಗ ಎಂದು 1 ನೇ ಪ್ರತಿವಾದಿಯ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ 36 ಇಂಟು 9 ಅಡಿ ಜಾಗವನ್ನು ಸರ್ಕಾರದವರು ಮುರಿಗೆಪ್ಪನಿಗೆ ಕೊಟ್ಟಿದರು ಅದನ್ನೆ ಕೆಂಚಪ್ಪನ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಿದ್ದೀಯಾ ಅಂದರೆ ಸಾಕ್ಷಿ ಅವರ ತಂದೆಗೆ ಕೊಟ್ಟಿದ್ದರು ಅದನ್ನೆ ಹಿರೆಯ ಮಗನ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಆ

ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 4 ರಲ್ಲಿ ಷಡ್ಯೂಲ್ (ಸಿ) ಕ್ರಮಸಂಖ್ಯೆ 3 ಮತ್ತು 4 ಎಂದು ಬರೆಸಿರುವಂತಹ ಆಸ್ತಿಗಳು ಯಾವುವು ಎಂದು ಗೊತ್ತು. ಅವುಗಳ ವಿಸ್ತೀರ್ಣ ಹೇಳಲು ಆಗುವುದಿಲ್ಲ. ಸದರಿ ಷಡ್ಯೂಲ್ (ಸಿ) ಯಲ್ಲಿರುವ 3 ಮತ್ತು 4 ನೇ ಆಸ್ತಿಗಳು ಜಮೀನು. ಸದರಿ ಆಸ್ತಿಗಳು ಜಮೀನುಗಳು ಎಂದು ವಕೀಲರಿಗೆ ಹೇಳಿಲ್ಲ. ಸದರಿ ಆಸ್ತಿಗಳು ಜಮಿನುಗಳು ಎಂದು ಸುಳ್ಳು ಹೇಳುತ್ತಿದ್ದು ಅವುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಮಲ್ಲೇಶಪ್ಪನಿಗೆ ಮುರಿಗೇಶಪ್ಪ ಸೈಟು ನಂಬರು 9 ಖಾತಾ ನಂಬರು 320 ನ್ನು ಕೊಟ್ಟಿರುವುದನ್ನು ನಾನು ನೋಡಿರುತ್ತೇನೆ ಅವುಗಳನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ. ಆ ರೀತಿ ಅದಲು ಬದಲು ಮಾಡಿಕೊಳ್ಳುವುದಕ್ಕೆ ದಾಖಲೆಗಳು ಅವರ ಬಳಿ ಇರುತ್ತವೆ. ಸದರಿ ದಾಖಲೆಗಳನ್ನು ನಾನು ನೋಡಿಲ್ಲ. ಅಂತಹ ದಾಖಲೆಗಳನ್ನು ವಾದಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾನೆಯೇ ಅಂದರೆ ಸಾಕ್ಷಿ ಕೊಟ್ಟಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಲ್ಲೇಶಪ್ಪ ಮತ್ತು ಮುರಿಗೆಪ್ಪ ಆ ರೀತಿ ಯಾವುದೇ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಬಗ್ಗೆ ವಾದಿ ದಾಖಲೆಗಳನ್ನು ಕೊಟ್ಟಿರಬಹುದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂಃ 29/ಪಿ ರಲ್ಲಿ 1 ಎಕರೆ 31 ಗುಂಟೆಯಲ್ಲಿ 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಆ ರೀತಿ ಮಾರಾಟ ಮಾಡಿರುವ ಪ್ರಮಾಣ ಪತ್ರವನ್ನು ನಾನು ನೋಡಿಲ್ಲ. ಅದನ್ನು ಎಷ್ಟು ಹಣಕ್ಕೆ ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಕೆಂಚಪ್ಪ ಮಾರಾಟ ಮಾಡಿರುವ ಕ್ರಯಪತ್ರವನ್ನು ನಾನು ನೋಡಿಲ್ಲ. ಸರ್ವೆ ನಂಃ 29/ಪಿ ರಲ್ಲಿ 1 ಎಕರೆ 31 ಗುಂಟೆ ಜಮೀನನ್ನು ನಿಪಿ 24 ರಂತೆ ನಾಗರಾಜಪ್ಪ ತಂದೆ ಗಂಗಪ್ಪ ಇವರಿಗೆ ಮುರಿಗೆಪ್ಪ ಮತ್ತು ಆತನ ಮಕ್ಕಳಾದ ವಾದಿ ಹಾಗೂ 1 ನೇ ಪ್ರತಿವಾದಿ ಮೂರು ಜನರು ಸೇರಿ 80,000-00 ರೂಗಳಿಗೆ ಮಾರಾಟ ಮಾಡಿರುತ್ತಾರೆ ಎನ್ನುವುದು ನಿಜ. ಮೂರು ಜನರು ಸೇರಿ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ 1 ನೇ ಪ್ರತಿವಾದಿ ಮಾತ್ರ ಮಾರಾಟ ಮಾಡಿರುತ್ತಾನೆ ಎಂದು ಸುಳ್ಳು ಹೇಳಿರುತ್ತೇನೆ ಅಂದರೆ ಸಾಕ್ಷಿ ಅವನೊಬ್ಬನೇ ಮಾರಾಟ ಮಾಡಿರುತ್ತಾನೆ ಎಂದು ತಿಳಿದುಕೊಂಡು ಆ ರೀತಿ ಹೇಳಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಅದೇ ರೀತಿ ನಾನು ಕಲ್ಪನೆ ಮಾಡಿಕೊಂಡು ವಿಚಾರಗಳನ್ನು ಹೇಳಿ ಬರೆಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ಹೇಳಿರುವ 5 ಜನ ಸಹೋದರರು ಯಾರು ಅಂದರೆ ಸಾಕ್ಷಿ ಬಸಪ್ಪ, ಮಲ್ಲೇಶಪ್ಪ , ಪಂಚಪ್ಪ , ನಾಗಪ್ಪ ಮತ್ತು ಮುರಿಗೆಪ್ಪ ಎಂದು ಹೇಳುತ್ತಾರೆ. (ಸಿ) ಷಡ್ಯೂಲನ ಕಮಸಂಖ್ಯೆ 3 ಮತ್ತು 4 ರ ಅಳತೆ ಹಾಗೂ

5 ಜನರಿಗೆ ಸಿ ಷಡ್ಯೂಲನ ಕ್ರಮಸಂಖ್ಯೆ 3 ಮತ್ತು 4 ಯಾರ್ಯಾರಿಗೆ ಯಾವ ಭಾಗ ಬಂದಿರುತ್ತದೆ ಅಂದರೆ ಸಾಕ್ಷಿ ಮೊದಲನೆಯದು ಮುರಿಗೆಪ್ಪನಿಗೆ, 2 ನೆಯದು ಬಸಪ್ಪನಿಗೆ, 3 ನೆಯದು ಮಲ್ಲೇಶಪ್ಪನಿಗೆ, 4 ನೆಯದು ನಾಗಪ್ಪನಿಗೆ, 5 ನೆಯದು ಪಂಚಪ್ಪನಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ. ಮೊದಲನೆಯದು ದಾರಿ ಕಡೆಯಿಂದ ಮೊದಲನೆಯದು ಇರುತ್ತದೆ. 5 ಜನರು ಹಂಚಿಕೊಂಡಂತಹ ಸದರಿ ಆಸ್ತಿಗಳ ಉದ್ದ ಅಗಲ ಹೇಳಲು ಆಗುವುದಿಲ್ಲ. 5 ಜನ ಅಣ್ಣ ತಮ್ಮಂದಿರು ಸದರಿ ಆಸ್ತಿಗಳಲ್ಲಿ ಭಾಗ ಮಾಡಿಕೊಂಡಾಗ ಮುರಿಗೆಪ್ಪನ ಹಿಸ್ಸೆಗೆ ಬಂದ ಆಸ್ತಿ ಸೈಟು ನಂಬರು 9 ಕಾನೇಶುಮಾರಿ ನಂಃ 320 , ಪೂರ್ವ-ಪಶ್ಚಿಮ 36 ಅಡಿ, ಉತ್ತರ-ದಕ್ಷಿಣ 9 ಅಡಿ ಬಂದಿರುತ್ತದೆಯೇ ಅಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಿ ಷಡ್ಯೂಲನ 3 ಮತ್ತು 4 ನೇ ಆಸ್ತಿಗಳನ್ನು ಮುರಿಗೆಪ್ಪ ಮತ್ತು ಅವನ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಒಟ್ಟು ಕುಟುಂಬದ ಯಜಮಾನಿಗೆ ಮಾಡುತ್ತಿದ್ದ ಎಂದು ಸುಳ್ಳು ಹೇಳಿರುತ್ತೇನೆ ಅಂದರೆ ಸರಿಯಲ್ಲ. ಮುರಿಗೆಪ್ಪ ಒಟ್ಟು ಕುಟುಂಬದ ಯಜಮಾನಿಗೆ ಮಾಡುತ್ತಿದ್ದ ಅಂದರೆ ಸರಿಯಲ್ಲ. ಮುರಿಗೆಪ್ಪನ ಹಿಸ್ಸೆಗೆ ಬಂದಂತಹ ಜಮೀನುಗಳು ಒಣ ಬೇಸಾಯದ ಜಮೀನುಗಳು ಅಂದರೆ ಸಾಕ್ಷಿ ಬೋರವೆಲಗಳು ಇರುತ್ತವೆ ಎಂದು ಹೇಳುತ್ತಾರೆ. ಬೋರವೆಲ್‌ಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿದ್ದಾಗ ಕೋಡಿಹಳ್ಳಿ ಜಮೀನನ್ನು ಕೊಂಡುಕೊಂಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಅಂದರೆ ಸರಿಯಲ್ಲ. ಕೋಡಿಹಳ್ಳಿ ಜಮೀನು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಹನಗವಾಡಿ ಬಿಟ್ಟು ಎಷ್ಟು ವರ್ಷ ಆಗಿರುತ್ತದೆ ಅಂದರೆ ಸಾಕ್ಷಿ ಈಗ ಒಂದು ವರ್ಷ ಆಗಿರುತ್ತದೆ ಎಂದು ಹೇಳುತ್ತಾರೆ. ವಾದಿ ಟ್ರಾಕ್ಟರನ್ನು ಓಡಿಸಿಕೊಂಡು ಕುಂದೂರಿನಲ್ಲಿ ವಾಸ ಇರುತ್ತಾನೆ. ವಾದಿ ಯಾವ ಊರಿನಲ್ಲಿ ಮದುವೆ ಆಗಿರುತ್ತಾನೆ ಎಂದು ಗೊತ್ತಿಲ್ಲ. ಕುಂದೂರಿನಲ್ಲಿ ವಾಸ ಇರುವ ಪೂರ್ವದಲ್ಲಿ ನಮ್ಮ ಊರಲ್ಲಿ ವಾಸ ಇದ್ದ. ಅವರ ಮನೆಯಲ್ಲಿ ಒಟ್ಟು ಕುಟುಂಬದಲ್ಲಿ ವಾಸ ಇದ್ದ. ಮುರಿಗೆಪ್ಪನ ಹಿಸ್ಸೆಗೆ

ಬಂದಂತಹ ಮನೆಯಲ್ಲಿ ವಾಸ ಇದ್ದ ಎನ್ನುವುದು ನಿಜ. ಸದರಿ ಮನೆ ಬಿದ್ದಾದ ನಂತರ ಊರು ಬಿಟ್ಟು ಹೋಗಿರುತ್ತಾನೆ ಎನ್ನುವುದು ನಿಜ. ಸದರಿ ಮನೆ ಬಿದ್ದು ಒಂದು ವರ್ಷ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲುಃ 1 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).**

**ಓ ಹೇ ಕೆ ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹರಿಹರ.**